

ರನ್ನನ ಜನ್ಮಸ್ಥಳ ಉತ್ತರ ಕರ್ನಾಟಕದ ಜಮಖಂಡಿಯ ಮುದವೊಳಲು. ಆತನ ಗದಾಯುದ್ಧ ರಚನೆಯ ಕಾಲ 1005. ರನ್ನ ಪಂಪನಂತೆಯೇ ರಾಜಾಶ್ರಯಿ. ಕಲ್ಯಾಣ ಚಾಲುಕ್ಯ ರಾಜನಾದ ಆಹಮಲ್ಲ ನೂರ್ಮಡಿ ತೈಲಪನ ಮಗನಾದ ಇರಿವಬೆಡಂಗ ಸತ್ಯಾಶ್ರಯಯನ ಆಸ್ಥಾನದಲ್ಲಿದ್ದ, ರಚಿಸಿದ ಕೃತಿಗಳು ಐದು. ಕಾವ್ಯ ನಿರ್ಮಿತಿಯಲ್ಲಿ ಪಂಪನ ಮಾರ್ಗವನ್ನೇ ಅನುಸರಿಸಿದ ರನ್ನನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತಾನು ಬರೆದ 'ಸಾಹಸಭೀಮ ವಿಜಯ' ಅಥವಾ 'ಗದಾಯುದ್ಧ' ಕಾವ್ಯದಲ್ಲಿ ವೀರರ ಹೊಡೆದಾಟಗಳ ದುರಂತ ಕತೆಯನ್ನು ಒಂದು ವಿಷಾದ ಕಾವ್ಯವಾಗಿ ಸೃಷ್ಟಿಸಿಬಿಟ್ಟಿರುತ್ತಾನೆ.

ದುರ್ಯೋಧನನು ಹಸ್ತಿನಾವತಿಯ ಚಕ್ರವರ್ತಿಯಾಗಿ ಸಾಧಿಸಿದ್ದು ಏನು ಎಂಬುದರ ಚಿತ್ರವನ್ನು ರನ್ನ ಓದುಗರ ಮುಂದಿಡುತ್ತಾನೆ. ಕೌರವ ಪಾಂಡವರು ಹದಿನೇಳು ದಿನಗಳ ಸಾಹಸದಲ್ಲಿ ಸೃಷ್ಟಿಸಿದ್ದು ಸತ್ತ ಆನೆ, ಕುದುರೆಗಳ ಬೆಟ್ಟವನ್ನು. ಒರಗಿ ಬಿದ್ದ ಕಾಲಾಳುಗಳ ಗುಡ್ಡವನ್ನು. ಹರಿಯುವ ರಕ್ತದ ತೊರೆಗಳನ್ನು. ಇದರ ಮೇಲೆ ಈ ಯುದ್ಧ ರಂಗದ ಯಾವುದೋ ಮೂಲೆಯಲ್ಲಿ ಬಾಣಗಳ ಮೊನೆಯ ಮೇಲೆ ಮಲಗಿದ್ದ ಕುರುಕುಲ ಪಿತಾಮಹ ಭೀಷ್ಮನನ್ನು ಕಾಣಹೊರಟ ದುರ್ಯೋಧನನಿಗೆ ಸತ್ತ ಪ್ರಾಣಿಗಳ ಶೈಲಗಳನ್ನು ಏರಿ ಇಳಿಯುವುದೇ ದುಸ್ತರವಾಯಿತು ಎನ್ನುತ್ತಾನೆ ರನ್ನ. ಈ ತೀವ್ರ ಹಾನಿಯ ಹಾದಿಯಲ್ಲಿ ದುರ್ಯೋಧನನಿಗೆ ಕಂಡದ್ದು ಗತಿಸಿಹೋದ ಗುರು ದ್ರೋಣ, ಸಹೋದರ ದುಶ್ಯಾಸನ, ಮಗ ಲಕ್ಷಣ ಇನ್ನಿಲ್ಲದಂತಾದ ಪ್ರಾಣ ಮಿತ್ರ ಕರ್ಣ. ಈ ರಾಧಾತನುಜ, ಕಾನೀನಕರ್ಣ ಸೂರ್ಯಮಂಡಲದಿಂದ ಕುಂತಿಯ ಬಸುರಲ್ಲಿ ಧರ್ಮರಾಯನಿಗಿಂತ ಮೊದಲೇ ಜನಿಸಿ ಬಂದವನು. ಸೂರ್ಯ ಸಂಜಾತನನ್ನು ಜಯಿಸಲು ಯಾರಿಂದಲೂ ಸಾಧ್ಯವಿಲ್ಲ ಎಂಬ ಮಾತನ್ನು ವ್ಯಾಸರು ಹೇಳಿದರೂ ಅಂಥವನ ರಥವೇ ಯುದ್ಧರಂಗದ ರಕ್ತದಲ್ಲಿ ಮುಳುಗಿತು. ಇದರೊಡನೆ ಕರ್ಣನ ಹುಟ್ಟಿನ ಅಚಾತುರ್ಯಕ್ಕಾಗಿ ಸಾರಥಿ ಶಲ್ಯನಿಂದ 'ಎಲೈ ಸೂತನೇ, ನಿನ್ನಂಥ ಹೀನ ಜಾತಿಯವನ ರಥವನ್ನು ಕ್ಷತ್ರಿಯನಾದ ನಾನು ನಡೆಸಬೇಕೆ' ಎಂದು ವಾಘೆಯವನ್ನು ಬಿಸಾಡಿ ನಡೆಯುತ್ತಾನೆ. ಕುರುಕ್ಷೇತ್ರವೆಂಬುದು ಯುದ್ಧರಂಗ, ಅದು ಬಂಧು ಮಿತ್ರರ ಮೇಳವಲ್ಲ, ಶತ್ರು ಮೇಳ. ಸೂರ್ಯಮೂಲ ಸಂಜಾತ ಕರ್ಣನ ರಥ ರಕ್ತದಲ್ಲಿ ಮುಳುಗುವಲ್ಲಿಯೇ ಅರ್ಜುನನ ಅಂಜನಾಸ್ತ್ರದಿಂದ ಹತನಾಗುತ್ತಾನೆ. ಕರ್ಣಾವಸಾನದಿಂದ ದುರ್ಯೋಧನನ ಅಂತರಂಗ ಸತ್ತು, ಅವನ ಉಳಿದ ದೇಹ ಭೀಮನ ಗಧೆಯ ಘಾತದ ಅಂತ್ಯಕ್ಕಾಗಿ ಉಳಿದಿರುತ್ತದೆ!

ದುರ್ಯೋಧನನು ವೈಶಂಪಾಯನ ಸರೋವರಕ್ಕೆ ಬರುವ ಮುನ್ನ ಅವನ ಸಹೋದರನ ಶವವನ್ನು ನೋಡುವಲ್ಲಿ ಒಂದು ಚಂಪೂ ಶೈಲಿಯ ವೃತ್ತ ಪದ್ಯ ಹೀಗಿದೆ–

ನಿಜ ಜೀವಂ ಪರಲೋಕದೊಳ್ ನಿಜ ಮಹಾಮಾಂಸಂ ಪಿಶಾಚಾಸ್ಯದೊಳ್
ನಿಜ ರಕ್ತಂ ರಿಪುಕುಕ್ಷಿಯೊಳ್ ನಿಜಶಿರಂ ನಕ್ತಂಚರಿ ಹಸ್ತದೊಳ್
ನಿಜ ಕಾಯಂ ಕುರುಭೂಮಿಯೊಳ್ ನೆಲಸೆ ಗಾಂಧಾರೀಜ ದುರ್ಯೋಧನಾ
ನುಜ ದುಶ್ಯಾಸನ ಭೀಮ ಭೀಮಗದೆಯಿಂ ಪಂಚತ್ವಮಂ ಪೊರ್ದಿದಯ್

ಈ ಪದ್ಯದ ಸಾರಾಂಶ, ದುಶ್ಯಾಸನನ ಛಿದ್ರವಿಚ್ಛಿದ್ರ ಶವ ನೆಲದಲ್ಲಿ ಒರಗಿದೆ. ಪ್ರಾಣ ಪರಲೋಕ ಸಂದಾಯವಾಗಿದೆ. ದೇಹದ ಮಾಂಸ ರಣರಂಗದಲ್ಲಿ ಅಡ್ಡಾಡುವ ಪಿಶಾಚಿಗಳ ಕೈಯಲ್ಲಿದೆ. ಎದೆ, ಉದರದ ರಕ್ತ ಭೀಮನ ಹೊಟ್ಟೆ ಸೇರಿದೆ. ತಲೆಬುರುಡೆ ರಾಕ್ಷಸರ ಪಾಲಾಗಿದೆ. ಹಾಗಾದರೆ ದುರ್ಯೋಧನ ತನ್ನ ಕಣ್ಣಿಂದ ನೋಡಬೇಕಾದ ಸಹೋದರನ ಸತ್ತ ದೇಹದ ಭಾಗಯಾವುದು?